ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

DTE-ADMI0ACM2/28/2026 (E-2212712)

ಆಯುಕ್ತರ ಕಛೇರಿ,
ತಾಂತ್ರಿಕ ಶಿಕ್ಷಣ ಭವನ,
ಅರಮನೆ ರಸ್ತೆ, ಬೆಂಗಳೂರು – 560 001.
ದಿನಾಂಕ:20.07.2026.

**-:: ಸು ತ್ತೋ ಲೆ ::-**

**ವಿಷಯ:** 2026-27ನೇ ಶೈಕ್ಷಣಿಕ ಸಾಲಿನ ಸರ್ಕಾರಿ/ಅನುದಾನಿತ/ ಖಾಸಗಿ ಪಾಲಿಟೆಕ್ನಿಕ್‌ಗಳಲ್ಲಿ **3ನೇ ಸೆಮಿಸ್ಟರ್ ತರಗತಿಗೆ ಪ್ರವೇಶ ಅವಧಿ ವಿಸ್ತರಿಸುವ ಬಗ್ಗೆ.**

**ಉಲ್ಲೇಖ:**
1. ಈ ಕಛೇರಿ ಸಮಸಂಖ್ಯೆ ಸುತ್ತೋಲೆ ದಿ:09.07.2026.
2. ಕಾರ್ಯದರ್ಶಿಗಳು, ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು ಇವರ ಸುತ್ತೋಲೆ ಸಂ. ಬಿಟಿಇ 03 ಇಎಪಿ 2025, ದಿ:14.07.2026.

***********

2026-27ನೇ ಶೈಕ್ಷಣಿಕ ಸಾಲಿನ 3ನೇ ಸೆಮಿಸ್ಟರ್ ಡಿಪ್ಲೋಮಾ ತರಗತಿಗೆ ದಂಡ ಶುಲ್ಕ ವಿಲ್ಲದೆ ಪ್ರವೇಶ ಪಡೆಯಲು ದಿ:20.07.2026 ಎಂದು ಉಲ್ಲೇಖ(1)ರ ಸುತ್ತೋಲೆಯಲ್ಲಿ ನಿಗಧಿಪಡಿಸಲಾಗಿತ್ತು. ಆದರೆ ಉಲ್ಲೇಖ(2)ರಲ್ಲಿ 2026ರ ಮೇ/ಜೂನ್ ತಿಂಗಳಿನಲ್ಲಿ ನಡೆದ ಸಿ-25 ಸೆಮಿಸ್ಟರ್ ಪರೀಕ್ಷೆಗಳ ಫಲಿತಾಂಶವನ್ನು ದಿ:16.07.2026ರಂದು ಮದ್ಯಾಹ್ನದಂದು ಪ್ರಕಟಿಸಲಾಗಿರುತ್ತದೆ.

ಆದುದರಿಂದ ವಿದ್ಯಾರ್ಥಿಗಳು ಪ್ರವೇಶ ಶುಲ್ಕವನ್ನು ಪಾವತಿಸಲು ಹೆಚ್ಚಿನ ಕಾಲವಕಾಶ ನೀಡಲು ಸಂಬಂಧಪಟ್ಟ ಪಾಲಿಟೆಕ್ನಿಕ್ ಪ್ರಾಂಶುಪಾಲರುಗಳು ಕೋರಿರುವುದನ್ನು ಪರಿಗಣಿಸಿ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ನಿಗಧಿತ ಶುಲ್ಕವನ್ನು ಪಾವತಿಸಿ ಪ್ರವೇಶ ಪಡೆಯಲು ಅವಧಿಯನ್ನು ಈ ಕೆಳಕಂಡಂತೆ ವಿಸ್ತರಿಸಲಾಗಿದೆ.

| | | |
|---|---|---|
| 01. | ತೃತೀಯ ಸೆಮಿಸ್ಟರ್ ಡಿಪ್ಲೋಮಾ ಅಭ್ಯರ್ಥಿಗಳ ಪ್ರವೇಶದ ಅಂತಿಮ ದಿನಾಂಕ: | • **ದಿ: 31.07.2026** ರ ಒಳಗೆ ಯಾವುದೇ ದಂಡ ಶುಲ್ಕವಿಲ್ಲದೇ ಪ್ರವೇಶ ನೀಡುವುದು.<br>• **ದಿನಾಂಕ:08.08.2026** ರ ಒಳಗೆ ರೂ.200/- ದಂಡ ಶುಲ್ಕದೊಂದಿಗೆ ಪ್ರವೇಶ ನೀಡುವುದು.<br>• **ದಿನಾಂಕ:17.08.2026** ರ ಒಳಗೆ ರೂ.400/- ದಂಡ ಶುಲ್ಕದೊಂದಿಗೆ ಪ್ರವೇಶ ನೀಡುವುದು.<br><br>ಅಂತಿಮವಾಗಿ **ದಿನಾಂಕ:22.08.2026** ರವರೆಗೆ ರೂ.1,000/- ದಂಡ ಶುಲ್ಕದೊಂದಿಗೆ ಪ್ರವೇಶ ನೀಡುವುದು. |

ವಿದ್ಯಾರ್ಥಿಗಳ ಕೋರ್ಸು ಬದಲಾವಣೆಯ ಪ್ರವೇಶವನ್ನು **ದಿ:31.07.2026** ರ ಒಳಗೆ ನೀಡುವುದು. ಸದರಿ ಪ್ರವೇಶದ ಅನುಮೋದನೆಗೆ ಸಂಬಂಧಿಸಿದಂತೆ **ಕಾರ್ಯದರ್ಶಿಯವರು, ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು ಇವರಿಗೆ ಪ್ರತ್ಯೇಕವಾಗಿ ನಿಗಧಿತ ಅವಧಿ ಒಳಗೆ ಪ್ರಸ್ತಾವನೆ ಸಲ್ಲಿಸುವುದು.**

ಮೇಲ್ಕಂಡ ಅವಧಿ ವಿಸ್ತರಣೆ ಹೊರತುಪಡಿಸಿ ಉಲ್ಲೇಖ(1)ರಲ್ಲಿನ ಸುತ್ತೋಲೆಯಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ. ತಾಂತ್ರಿಕ ಪರೀಕ್ಷಾ ಮಂಡಳಿ ನಿಯಮಗಳನ್ವಯ ಹಾಜರಾತಿಯನ್ನು ಪೂರೈಸುವ ಷರತ್ತಿಗೊಳಪಟ್ಟು ಮೇಲ್ಕಂಡ ಅವಧಿಯಲ್ಲಿ ಸದರಿ ವಿದ್ಯಾರ್ಥಿಗಳಿಗೆ ಮಾತ್ರ ಅನ್ವಯವಾಗುವಂತೆ ಪ್ರವೇಶ ನೀಡತಕ್ಕದ್ದು.

**ನಿರ್ದೇಶಕರು**
**ತಾಂತ್ರಿಕ ಶಿಕ್ಷಣ ಇಲಾಖೆ**
**ಬೆಂಗಳೂರು**

ಗೆ,

ರಾಜ್ಯದ ಎಲ್ಲಾ ಸರ್ಕಾರಿ / ಅನುದಾನಿತ /ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರಿಗೆ - ಮಾಹಿತಿ ಮತು ಸೂಕ್ತ ಅನುಸರಣೆಗಾಗಿ.

**ಪ್ರತಿ ಇವರಿಗೆ ಮಾಹಿತಿಗಾಗಿ:**

1. ಆಯುಕ್ತರ ಆಪ್ತಶಾಖೆಗೆ.
2. ನಿರ್ದೇಶಕರ ಆಪ್ತಶಾಖೆಗೆ.
3. ಜಂಟಿ ನಿರ್ದೇಶಕರು(ಆಡಳಿತ), ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
4. ಜಂಟಿ ನಿರ್ದೇಶಕರು(ಪರೀಕ್ಷೆ), ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು.
5. ಇ-ಆಡಳಿತ ವಿಭಾಗಕ್ಕೆ - ಸದರಿ ಸುತ್ತೋಲೆಯನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸುವುದು.

7. ರಿಜಿಸ್ಟ್ರಾರ್(ಪರೀಕ್ಷೆ), ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
8. ಆರ್.ಡಿ.ಎಂ ವಿಭಾಗಗಳಿಗೆ.
9. ಇಆರ್‌ಎಸ್(3) ವಿಭಾಗಕ್ಕೆ
10. ಕಛೇರಿ ಪ್ರತಿ